ಇಂದು ದಿನಾಂಕ:21.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ವಕೀಲರಿಂದಃ

ನನ್ನ ಮಗ ಓದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಷಯಗಳನ್ನು ತಿಳಿದುಕೊಂಡಿಲ್ಲ. ನಾನು ಮತ್ತು ನನ್ನ ಮಗ ದಾವಾ ಆಸ್ತಿಯನ್ನು ದಿಃ 08-03-2008 ರಂದು ಮಾಡಿದ ಕ್ರಯಪತ್ರಕ್ಕೆ ನಾನು ಮತ್ತು ನನ್ನ ಮಗ ಸಹಿ ಮಾಡಿಲ್ಲ. 1 ನೇ ಪ್ರತಿವಾದಿ ಗಂಡ ಹಾಗೂ 2 ನೇ ಪ್ರತಿವಾದಿ ತಂದೆ ಲೋಕೇಶ್ ರವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸುಳ್ಳು. ಕ್ರಯ ಪತ್ರವನ್ನು ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ . 2008 ರಿಂದ ದಾವಾ ಆಸ್ತಿಯ ಕಂದಾಯ ಕಟ್ಟಿರುವ ರಸೀದಿಗಳು ನಮ್ಮ ಮನೆಯಲ್ಲಿ ಇವೆ. ಸುಳ್ಳು ಆರ್ ಟಿ ಸಿ ಬರುತ್ತಿದೆ. ಆದರಿಂದ ಕೇಸು ಹಾಕಿದ್ದೇನೆ. 2024 ರಲ್ಲಿ ಆರ್ ಟಿ ಸಿ ಪಡೆದುಕೊಂಡಿದ್ದೇನೆ. ಅದಕ್ಕಿಂತ ಮೊದಲು ಯಾವುದೇ ವಿಷಯ ಗೊತ್ತಿರಲಿಲ್ಲ. ಪ್ರತಿವಾದಿಗಳು ಜಗಳ ಮಾಡಲು ನಮ್ಮ ಬಳಿ ಬಂದಿಲ್ಲ. ನಿಪಿ 2 ರಲ್ಲಿರುವ ತನ್ನ ಮತ್ತು ತನ್ನ ಮಗನ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 2 ಎ ಹಾಗೂ ನಿಪಿ 2 ಬಿ ಎಂದು ಗುರುತಿಸಲಾಯಿತು. ದಿಃ 08-03-2008 ರಂದು ನಾನು ಮತ್ತು ನನ್ನ ಮಗ ದಾವಾ ಆಸ್ತಿಯನ್ನು ಲೋಕೇಶ್ ರವರಿಗೆ ಖುದ್ದು ಕ್ರಯ ಮಾಡಿಕೊಟ್ಟಿದ್ದೇವೆ ಎಂದರೆ ಸುಳ್ಳು. 2008 ರಲ್ಲಿ ನಾವು ಉಪನೊಂದಣಾಧಿಕಾರಿಗಳ ಕಛೇರಿಗೆ ಹೋಗಿಲ್ಲ ಹಾಗೂ ಸಹಿ ಮಾಡಿಲ್ಲ. ಮೈಸೂರು ಜಿಲ್ಲಾ ಉಪನೊಂದಣಾಧಿಕಾರಿಗಳ ಕಛೇರಿಗೆ ಹೋಗಿ ನಾವು ತಕರಾರು ಸಲ್ಲಿಸಿಲ್ಲ. 1 ನೇ ಪ್ರತಿವಾದಿ ಗಂಡ ತೀರಿಕೊಂಡ ನಂತರ ದಾವಾ ಆಸ್ತಿಯಲ್ಲಿ ಪ್ರತಿವಾದಿಗಳೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸುಳ್ಳು. 2008 ರಲ್ಲಿ ಪ್ರತಿವಾದಿಗಳೇ ಖಾತೆದಾರರಾಗಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿಗಳು ಅವತ್ತಿನಿಂದಲೂ ಸ್ವಾಧೀನ ಇದ್ದಾರೆ ಆದರೂ ಸಹ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸುಳ್ಳು ಈ ಸಂಬಂಧ ನಾನು ಪೋಲಿಸರಿಗೆ ದೂರು ನೀಡಿಲ್ಲ.

ಪೋಲಿಸರಿಗೆ ದೂರು ಕೊಡಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ನಾನು ಅನುಭವದಲ್ಲಿ ಇದ್ದ ಕಾರಣ ದೂರು ನೀಡಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನ ಇರುವ ಬಗ್ಗೆ ಕಂದಾಯ ಅಧಿಕಾರಿಗಳಿಂದ ಸರ್ಟಿಫಿಕೇಟ್ ಹಾಜರುಪಡಿಸಲು ಸಾಧ್ಯ ಇಲ್ಲ. ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ದರೆ ಸರ್ಟಿಫಿಕೇಟ್ ಹಾಜರುಪಡಿಸುತ್ತಿದೆ, ನಾನು ಯಾವತ್ತೂ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇರುವುದರಿಂದ ಬೆಳೆ ನಾಶ ಮಾಡಲು ಬಂದಿಲ್ಲ ಎಂದರೆ ಸರಿ . ನಾನು ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸುಳ್ಳು ವ್ಯಾಜ್ಯ ಕಾರಣ ಸಲ್ಲಿಸಿ ರುತ್ತೇನೆ ಎಂದರೆ ಸರಿಯಲ್ಲ. 2008 ರಲ್ಲಿ ದಾವಾ ಆಸ್ತಿಗಳನ್ನು ಪ್ರತಿವಾದಿಗಳು ಖರೀದಿಸಿರುವುದರಿಂದ ನಾನು ಸಲ್ಲಿಸಿರುವ ದಾವೆ ಕಾಲಾತೀತವಾಗಿದೆ ಎಂದರೆ ಸರಿಯಲ್ಲ. ಕ್ರಯ ಪತ್ರದ ಆಧಾರದ ಮೇಲ ಪ್ರತಿವಾದಿಗಳೇ ಹಕ್ಕು ಮತ್ತು ಸ್ವಾಧೀನ ಇದ್ದಾರೆ ಎಂದರೆ ಸುಳ್ಳು. ಅಕ್ರಮ ಲಾಭ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾಧೀನ ಇದ್ದು ನಾನೇ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**